

# ಹಿರಿತೆರೆ, ಒಟಿಟಿ ಎಲ್ಲೆಲ್ಲೂ ರಾಧೆ

■ ವಿಶಾಖ ಎನ್.

ಸಿನಿಮಾಗಳನ್ನು ಮನೆ ಮನೆಗೆ ಯಾವುದಾದರೂ ಡಿಜಿಟಲ್ ಪರಿಕರಗಳ ಮೂಲಕ ತಲುಪಿಸುವ ಕಾಲ ಬಂದೇ ಬರುತ್ತದೆ ಎಂದು ಕೆಲವೇ ವರ್ಷಗಳ ಹಿಂದೆ ನಿರ್ದೇಶಕ ಯೋಗರಾಜ್ ಭಟ್ ಭವಿಷ್ಯ ನುಡಿದಿದ್ದರು. ಅದೀಗ ದೊಡ್ಡ ಮಟ್ಟದಲ್ಲಿ ನಿಜವಾಗುತ್ತಿದೆ. 'ರಾಧೆ: ಯುವರ್ ಮೋಸ್ಟ್ ವಾಂಟೆಡ್ ಭಾಯ್' ಮೊದಲೇ ನಿರ್ಧರಿಸಿದಂತೆ ಈದ್ ಹಬ್ಬದ ಸಂದರ್ಭದಲ್ಲೇ ತೆರೆಕಾಣಲಿದೆ. ಅಂದರೆ, ಮೇ 13ರಂದು ಬಿಡುಗಡೆ ಪಕ್ಕಾ ಎಂದು ಚಿತ್ರತಂಡ ಟ್ವೀಟ್ ಮಾಡಿದೆ. ವಿಶೇಷವೆಂದರೆ, ಬರೀ ಚಿತ್ರಮಂದಿರಗಳಲ್ಲಿ ಅಷ್ಟೇ ಅಲ್ಲದೆ ಝೀಪ್ಲೆಕ್ಸ್ ಮಾಧ್ಯಮದ ಮೂಲಕ ಒಟಿಟಿಯಲ್ಲೂ ಬಿಡುಗಡೆಯಾಗಲಿದೆ. ವಾರ್ಷಿಕ ಚಂದಾದಾರರಾಗಿರುವವರು ನೋಡುವ ಮಾದರಿಯಲ್ಲಿ ಈ ಸಿನಿಮಾ ತೆರೆಕಾಣುತ್ತಿಲ್ಲ. ಬದಲಿಗೆ, ಒಂದು ವೀಕ್ಷಣೆಗೆ ಇಷ್ಟು ಎಂದು ಹಣ ನಿಗದಿಪಡಿಸಿ, ಒಟಿಟಿಯಲ್ಲಿ ನೋಡುವ ಅವಕಾಶ ಸೃಷ್ಟಿಸಲಾಗುತ್ತಿದೆ. ಡಿಷ್, ಡಿ2ಎಚ್, ಟಾಟಾ ಸ್ಕೈ, ಏರ್‌ಟೆಲ್ ಟಿವಿ ಇಂತಹ ಸಂಪರ್ಕ ಪಡೆದವರೂ ಅದೇ ಮಾದರಿಯಲ್ಲಿ 'ರಾಧೆ' ಸಿನಿಮಾ ನೋಡಬಹುದು.

ಕೋವಿಡ್ ಎರಡನೇ ಅಲೆ ವ್ಯಾಪಿಸಿದ್ದರಿಂದ ಜನಜೀವನ ಮತ್ತೆ ಸಂಕಷ್ಟದಲ್ಲಿದೆ. ಇಂತಹ ಸಂದರ್ಭದಲ್ಲಿ ಚಿತ್ರಮಂದಿರಗಳಲ್ಲಿ ದೊಡ್ಡ ಚಿತ್ರ ಬಿಡುಗಡೆ ಮಾಡುವುದು ದೂರದ ಮಾತು ಎಂದೇ ಭಾವಿಸಲಾಗಿತ್ತು. ಆದರೆ, ಸಲ್ಮಾನ್ ಚಿತ್ರ ಈದ್ ಸಂದರ್ಭದಲ್ಲಿ ಬಿಡುಗಡೆಯಾಗುವುದು ಅನೂಚಾನವಾಗಿ ನಡೆದುಕೊಂಡು ಬಂದಿದೆ. ಕಳೆದ ವರ್ಷ ಕೋವಿಡ್ ಲಾಕ್‌ಡೌನ್ ಇದ್ದಿದ್ದರಿಂದ ಬಿಡುಗಡೆಯ ಯೋಚನೆಯನ್ನೇ ಯಾರೂ ಮಾಡಿರಲಿಲ್ಲ. ಈಗ ಖುದ್ದು ಸಲ್ಮಾನ್ ಬಿಡುಗಡೆ ಪಕ್ಕಾ ಎಂದು ಟ್ವೀಟ್ ಮಾಡಿದ್ದಾರೆ.

'ಚಿತ್ರಮಂದಿರಗಳ ಮಾಲೀಕರು ತುಂಬಾ ಕಷ್ಟದಲ್ಲಿದ್ದಾರೆ. ಕೋವಿಡ್ ಮಾರ್ಗಸೂಚಿ ಪಾಲಿಸಿ, ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಂಡು ಪ್ರೇಕ್ಷಕರಿಗೆ ಸಿನಿಮಾ ತೋರಿಸುವ ಹೊಣೆಗಾರಿಕೆ ಅವರ ಮೇಲಿದೆ. ಅವರಿಗೆ ನಿರಾಸೆಯಾಗದಿರಲಿ ಎಂದು ಮೊದಲು ತಿಳಿಸಿದಂತೆಯೇ ಚಿತ್ರ ಬಿಡುಗಡೆಯಾಗಲಿದೆ' ಎಂಬರ್ಥದ ಸಾಲುಗಳನ್ನು ಅವರು ಬರೆದಿದ್ದಾರೆ.

ಸಲ್ಮಾನ್ ಖಾನ್ ಚಿತ್ರ ತೆರೆಕಂಡಾಗ ಸಮುದ್ರದಲ್ಲಿ ತಿಮಿಂಗಿಲವೊಂದು ಬಾಯಿ ತೆರೆದಂತಹ ಸ್ಥಿತಿ ಭಾರತದ ಬಹುತೇಕ ಚಿತ್ರರಂಗಗಳಲ್ಲಿ ಮೂಡುತ್ತದೆ. ಆಗ ಬಹುತೇಕ ಪ್ರಾದೇಶಿಕ ಚಿತ್ರಗಳನ್ನು ಬಿಡುಗಡೆ ಮಾಡಲು ಹಿಂದೇಟು ಹಾಕುವವರೇ ಹೆಚ್ಚು. ಈಗ ಅವರ ಮಾರುಕಟ್ಟೆಯನ್ನೇ ಚಿತ್ರಮಂದಿರಗಳಿಂದ ಆಚೆಗೆ ಒಟಿಟಿಯಲ್ಲೂ ವಿಸ್ತರಿಸಿಕೊಳ್ಳುವ ಯೋಚನೆ ಮಾಡಿರುವುದು ಆಸಕ್ತಿಕರ ಬೆಳವಣಿಗೆಯಂತೂ ಹೌದು. ■

## ಭಾರತದಲ್ಲಿ ಅಭಿನಯಿಸಿದ ಮೊದಲ ಲ್ಯಾಟಿನಾ ನಟಿ



ಎಡಿಲ್ಸಿ ವರ್ಗಸ್ ಎಂಬ ಹೆಣ್ಣುಮಗಳ ಹೆಸರು ತಮಿಳು ಚಿತ್ರರಂಗದಲ್ಲಿ ಅಷ್ಟೇ ಅಲ್ಲದೆ ಬಾಲಿವುಡ್ ಓಣಿಗಳಲ್ಲೂ ಓಡಾಡುತ್ತಿದೆ. ದಕ್ಷಿಣ ಅಮೆರಿಕದ ಡೊಮೆನಿಕ್ ರಿಪಬ್ಲಿಕ್ ದೇಶದಲ್ಲಿ ಹುಟ್ಟಿದ ಎಡಿಲ್ಸಿ ಅವರ ಸಪೂರ ದೇಹ ನೋಡಿದವರು ಈ ನಟಿಯ ವಯಸ್ಸನ್ನು ಅಂದಾಜು ಮಾಡಲಾರರದು. ಈಗ 32ರ ಹರೆಯದ ಅವರಿಗೆ ಮೈಕ್ ಎಂಬ ಪರಿದೇವರೂ ಇದ್ದಾರೆ. ಅವರು ಅದಾಗಲೇ ಇಂಗ್ಲಿಷ್‌ನ ಕೆಲವು ಟಿವಿ ಕಾರ್ಯಕ್ರಮಗಳನ್ನು, ಶೋಗಳನ್ನು ನಿರ್ಮಾಣ ಮಾಡಿದ್ದಾರೆ. ಭಾರತೀಯ ಚಿತ್ರರಂಗದಲ್ಲಿ ಇದೇ ಮೊದಲ ಬಾರಿಗೆ ಲ್ಯಾಟಿನಾ ನಟಿಯೊಬ್ಬಳು ತೆರೆಮೇಲೆ ಕಂಡಿದ್ದಾರೆನ್ನುವುದು ಹೆಗ್ಗಳಿಕೆ.

ಎ.ಆರ್. ರೆಹಮಾನ್ ನಿರ್ಮಾಣದ '99 ಸಾಂಗ್ಸ್' ಚಿತ್ರದ ನಾಯಕಿಯಾಗಿ ಎಡಿಲ್ಸಿ ಅಭಿನಯ ಕಂಡು ಅನೇಕರು ನಮ್ಮದೇ ದೇಶದ ಹುಡುಗಿ ಎಂದು ಭಾವಿಸಿದ್ದರು. ಮೂಕಿ ಪಾತ್ರದಲ್ಲಿ ನಟಿಸಿದ್ದರಿಂದ ಭಾಷೆ ಅವರಿಗೆ ತೊಡಕಾಗಲಿಲ್ಲ. ಆದರೆ, ಭಾವ ಸ್ಫುರಿಸಬೇಕಾದ ದೃಶ್ಯಗಳಿಗೆ ಜೀವತುಂಬುವುದು ಸುಲಭವೇನೂ ಆಗಿರಲಿಲ್ಲ.

ನಿರ್ದೇಶಕ ವಿಶ್ವೇಶ್ ಕೃಷ್ಣಮೂರ್ತಿ ತಮಗೆ ತುಂಬಿದ ಧೈರ್ಯವನ್ನು ಎಡಿಲ್ಸಿ ಪದೇ ಪದೇ ನೆನೆಯುತ್ತಿದ್ದಾರೆ. ಕಣ್ಣಲ್ಲಿ ನೀರು ತುಂಬಿಕೊಂಡು ದುಃಖ ತುಳುಕಿಸಬೇಕಾದ ಸನ್ನಿವೇಶಕ್ಕೆ ನ್ಯಾಯ ಸಲ್ಲಿಸಲಾಗದೆ ಪರದಾಡಿ, ಕುಸಿದು ನೆಲದ ಮೇಲೆ ಬಿಕ್ಕಿದ್ದಾಗ, ವಿಶ್ವೇಶ್ ಅವರಿಗೆ ಧೈರ್ಯ ತುಂಬಿದ್ದರು. ದೃಶ್ಯಭಾಷೆ ದೇಶಾತೀತ ಎನ್ನುವ ಈ ನಟಿ ಇಂಗ್ಲಿಷ್‌ನ ಕೆಲವು ಚಿತ್ರಗಳಲ್ಲಿ ಅದಾಗಲೇ ಅಭಿನಯಿಸಿ ಪಳಗಿದ್ದಾರೆ. ಕೆಲವು ಹಿಂದಿ ಚಿತ್ರಗಳ ಅವಕಾಶಗಳೂ ಅವರನ್ನು ಹುಡುಕಿಕೊಂಡು ಬರಲಿವೆ ಎನ್ನುವುದು ಬಾಲಿವುಡ್ ವಿಶ್ಲೇಷಕರ ಅಭಿಪ್ರಾಯ. ■